ಕರ್ನಾಟಕ ಸರ್ಕಾರ

# ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ, ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು ತಾಲ್ಲೂಕು, ಗೌರಿಬಿದನೂರು

ದೂರವಾಣಿ ಸಂಖ್ಯೆ: 08155 – 286550 ಇ-ಮೇಲ್ ವಿಳಾಸ: amoghgbnr123@gmail.com

ಸಂಖ್ಯೆ: ಸಾಆಗೌ/ಹೊರಗುತ್ತಿಗೆ/ಟೆಂಡರ್/34/2025-26 ದಿನಾಂಕ: / /2026

## 2026-27 ನೇ ಸಾಲಿನಲ್ಲಿ ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು ಇಲ್ಲಿಗೆ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ, ಫಾರ್ಮಸಿ ಅಧಿಕಾರಿ, ಡೇಟಾ ಎಂಟ್ರಿ ಆಪರೇಟರ್ ಮತ್ತು ಗ್ರೂಪ್ 'ಡಿ' ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

# ಇ-ಟೆಂಡರ್ ಫಾರಂ

# 2026-2027

ಕರ್ನಾಟಕ ಸರ್ಕಾರ

# ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ, ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು ತಾಲ್ಲೂಕು, ಗೌರಿಬಿದನೂರು

**ದೂರವಾಣಿ ಸಂಖ್ಯೆ: 08155 – 286550** **ಇ-ಮೇಲ್ ವಿಳಾಸ:** amoghgbnr123@gmail.com

---

ಸಂಖ್ಯೆ: ಸಾಆಗೌ/**ಹೊರಗುತ್ತಿಗೆ/ಟೆಂಡರ್**/34/2025-26 **ದಿನಾಂಕ:** / /2026

**-:ಇ-ಟೆಂಡರ್ ಅಧಿಸೂಚನೆ:-**

**ವಿಷಯ:** 2026-27 ನೇ ಸಾಲಿಗೆ ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು ಇಲ್ಲಿಗೆ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ, ಫಾರ್ಮಾಸಿ ಅಧಿಕಾರಿ, ಡೇಟಾ ಎಂಟ್ರಿ ಆಪರೇಟರ್ ಮತ್ತು ಗ್ರೂಪ್ 'ಡಿ' ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

**ಉಲ್ಲೇಖ:**
1. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಮುಲೆಪ(ಆಂ/ಆಡಿ/ಹೊ.ಗುತ್ತಿಗೆ-ಗ್ರೂಪ್‌ಡಿ/56/2019-20, ದಿನಾಂಕ: 31.12.2019.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಮುಲೆಪ(ಆಂ/ಆಡಿ/ಗ್ರೂಪ್ ಡಿ-ನಿಬಂದನೆ/61/2019-20, ದಿನಾಂಕ: 13.01.2020.
3. ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ರವರ ಅನುಮೋದನೆ ದಿನಾಂಕ: ------------ರಂತೆ.

***&***

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದನುಸಾರ 2025-26 ನೇ ಸಾಲಿಗೆ ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು ಇಲ್ಲಿಗೆ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ, ಫಾರ್ಮಾಸಿ ಅಧಿಕಾರಿ, ಡೇಟಾ ಎಂಟ್ರಿ ಆಪರೇಟರ್ ಮತ್ತು ಗ್ರೂಪ್ 'ಡಿ' ಸಿಬ್ಬಂದಿಯ ಸೇವೆಯನ್ನು ಹೊರಸಂಪನ್ಮೂಲದಿಂದ ಪಡೆಯುವ ಸಲುವಾಗಿ ಇ-ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿದೆ. ವಿವರಗಳು ಕೆಳಕಂಡಂತಿದೆ.

| ಕ್ರ.ಸಂ | ವಿವರ | |
|---|---|---|
| 1 | ಟೆಂಡರ್ ಪ್ರಕಟಣೆಯ ದಿನಾಂಕ | **ದಿನಾಂಕ:** |
| 2 | ಇ.ಎಂ.ಡಿ ಮೊತ್ತ | ರೂ. 1,45,000/-+ ಇ-ಪ್ರೊಕ್ಯೂರ್‌ಮೆಂಟ್ ಶುಲ್ಕ |
| 3 | ಟೆಂಡರ್ ಪ್ರಾರಂಭದ ದಿನಾಂಕ (Web Portal) | **ದಿನಾಂಕ.09.05.2025** |
| 4 | ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಕೆಗೆ ಕೊನೆಯ ದಿನಾಂಕ & ಸಮಯ | ದಿನಾಂಕ: 23/03/2026 ರಂದು ಮಧ್ಯಾಹ್ನ: 5.30 ಗಂಟೆಗೆ |
| 5 | ಪ್ರಿ ಬಿಡ್ ಸಭೆಯ ದಿನಾಂಕ & ಸಮಯ | ದಿನಾಂಕ: 18/03/2026 ರಂದು 11.00 ಗಂಟೆಗೆ |
| 6 | ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ &ಸಮಯ | ದಿನಾಂಕ: 25/03/2026 ರಂದು 11.00 ಗಂಟೆಗೆ |
| 7 | ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ: 27/03/2026 ರಂದು: 11.00 ಗಂಟೆಗೆ |

ಹೆಚ್ಚಿನ ವಿವರಗಳನ್ನು http://kppp.karnataka.gov.in ಹಾಗೂ ಕಚೇರಿ ವೇಳೆಯಲ್ಲಿ ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು ಇಲ್ಲಿ ಸಂಪರ್ಕಿಸಿ ಪಡೆಯಬಹುದು.

**ಆಡಳಿತ ವೈದ್ಯಾಧಿಕಾರಿ**
**ಸಾರ್ವಜನಿಕ ಹಾಗೂ ತಾಯಿ ಮತ್ತು**

**ವಿವರ:**

| ಕ್ರ.ಸಂ | ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ | ಇ.ಎಂ.ಡಿ ಮೊತ್ತ | ಅವಧಿ |
|---|---|---|---|---|
| 01 | ಗ್ರೂಪ್ ಡಿ ಸಿಬ್ಬಂದಿ | 20 | ರೂ.145000/- | ಕಾರ್ಯಾದೇಶ ನೀಡಿದ ದಿನಾಂಕದಿಂದ 31.03.2027ರವರಗೆ ಅಥವಾ ಮುಂದಿನ ಆದೇಶದವರೆಗೆ |
| 02 | ಫಾರ್ಮಾಸಿ ಅಧಿಕಾರಿ | 1 | | |
| 03 | ಡೇಟಾ ಎಂಟ್ರಿ ಆಪರೇಟರ್ | 1 | | |
| 04 | ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ | 1 | | |
| **ಒಟ್ಟು** | | **23** | | |

(ನೇಮಿಸಿಕೊಳ್ಳುವ ಸಿಬ್ಬಂದಿಯವರ ಸಂಖ್ಯೆ ಆಡಳಿತ ವೈದ್ಯಾಧಿಕಾರಿಗಳ ತೀರ್ಮಾನದಂತೆ ಮಾರ್ಪಾಡಾಗುವ ಸಾಧ್ಯತೆಗಳಿರುತ್ತವೆ).

**ವಿದ್ಯಾರ್ಹತೆಯ ವಿವರಗಳು:**

| ಕ್ರ.ಸಂ | ಹುದ್ದೆಗಳ ವಿವರ | ವಿದ್ಯಾರ್ಹತೆ |
|---|---|---|
| 01 | ಕಿರಿಯ ಪ್ರಯೋಗಶಾಲಾ ತಂತ್ರಜ್ಞರು | ಡಿ.ಎಂ.ಎಲ್.ಟಿ. ಪರೀಕ್ಷೆಯಲ್ಲಿ ತೇರ್ಗಡೆ/ಪದವಿ ಹೊಂದಿರಬೇಕು. ವಯಸ್ಸು ಕನಿಷ್ಠ 18 ವರ್ಷ ಗರಿಷ್ಠ 40 ವರ್ಷ ಮೀರಿರಬಾರದು. ಗಣಕ ಯಂತ್ರ ತರಬೇತಿ ಪೂರೈಸಿರಬೇಕು ಹಾಗೂ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು |
| 02 | ಫಾರ್ಮಾಸಿಸ್ಟ್ | ಡಿಪ್ಲೋಮಾ ಇನ್ ಫಾರ್ಮಾಸಿಯಲ್ಲಿ ತೇರ್ಗಡೆ/ಪದವಿ ಹೊಂದಿರಬೇಕು, (ಕರ್ನಾಟಕ ಫಾರ್ಮಾಸಿ ಕೌನ್ಸಿಲ್) ನಲ್ಲಿ ನೋಂದಣಿ ಆಗಿರಬೇಕು. ವಯಸ್ಸು ಕನಿಷ್ಠ 18 ವರ್ಷ ಗರಿಷ್ಠ 40 ವರ್ಷ ಮೀರಿರಬಾರದು. ಗಣಕ ಯಂತ್ರ ತರಬೇತಿ ಪೂರೈಸಿರಬೇಕು ಹಾಗೂ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು |
| 03 | ಡೇಟಾ ಎಂಟ್ರಿ ಆಪರೇಟರ್ | ದ್ವಿತೀಯ ಪಿ.ಯು.ಸಿ ತೇರ್ಗಡೆ ಹೊಂದಿರಬೇಕು 01 ವರ್ಷದ ಗಣಕ ಯಂತ್ರ ತರಬೇತಿ ಪೂರೈಸಿರಬೇಕು. (ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಕಿರಿಯ/ಹಿರಿಯ ಬೆರಳಚ್ಚಿನಲ್ಲಿ ತೇರ್ಗಡೆ ಹೊಂದಿರುವ 30 WPM ಪದಗಳ ವೇಗ ಇರಬೇಕು) ವಯಸ್ಸು ಕನಿಷ್ಠ 18 ವರ್ಷ ಗರಿಷ್ಠ 40 ವರ್ಷ ಮೀರಿರಬಾರದು. (ಕನಿಷ್ಠ 02 ವರ್ಷ ಅನುಭವ ಹೊಂದಿರಬೇಕು) |
| 04 | ಗ್ರೂಪ್ ಡಿ ಸಿಬ್ಬಂದಿ | 10 ನೇ ತರಗತಿ ಪಾಸಾಗಿರಬೇಕು ವಯಸ್ಸು ಕನಿಷ್ಠ 18 ವರ್ಷ ಗರಿಷ್ಠ 40 ವರ್ಷ ಮೀರಿರಬಾರದು. |

1. ಭರ್ತಿ ಮಾಡಿದ ಟೆಂಡರ್ ಫಾರಂನ್ನು http://kppp.karnataka.gov.in ಅಂತರ್ಜಾಲಕ್ಕೆ ಅಪ್‌ಲೋಡ್ ಮೂಲಕ ದಿನಾಂಕ; 23/03/2026 ರಂದು ಮದ್ಯಾಹ್ನ 5.0 ಘಂಟೆಯೊಳಗೆ ಮಾಡುವುದು.
2. ಇ.ಎಂ.ಡಿ ಮೊತ್ತ ರೂ. 974850/- ಯಶಸ್ವಿಟೆಂಡರ್‌ದಾರರು ಕಾರ್ಯಾದೇಶ ಪಡೆಯುವ ಮುನ್ನ ಭದ್ರತಾ ಠೇವಣಿಯ ಶೇ.10% ರಷ್ಟು ಡಿಡಿ ರೂಪದಲ್ಲಿ ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು ರವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು.
3. **ಟೆಂಡರ್ ವೇಳಾಪಟ್ಟಿ:**

| ಕ್ರ.ಸಂ | ವಿವರ | |
|---|---|---|
| 1 | ಟೆಂಡರ್ ಪ್ರಕಟಣೆಯ ದಿನಾಂಕ | **ದಿನಾಂಕ:** |
| 2 | ಇ.ಎಂ.ಡಿ ಮೊತ್ತ | ರೂ. 1,45,000/-+ ಇ-ಪ್ರೊಕ್ಯೂರ್‌ಮೆಂಟ್ ಶುಲ್ಕ |
| 3 | ಟೆಂಡರ್ ಪ್ರಾರಂಭದ ದಿನಾಂಕ (Web Portal) | **ದಿನಾಂಕ.09.05.2025** |
| 4 | ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಕೆಗೆ ಕೊನೆಯ ದಿನಾಂಕ & ಸಮಯ | ದಿನಾಂಕ: 23/03/2026 ರಂದು ಮಧ್ಯಾಹ್ನ: 5.30 ಗಂಟೆಗೆ |
| 5 | ಪ್ರಿ ಬಿಡ್ ಸಭೆಯ ದಿನಾಂಕ & ಸಮಯ | ದಿನಾಂಕ: 18/03/2026 ರಂದು 11.00 ಗಂಟೆಗೆ |
| 6 | ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ &ಸಮಯ | ದಿನಾಂಕ: 25/03/2026 ರಂದು 11.00 ಗಂಟೆಗೆ |
| 7 | ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ: 27/03/2026 ರಂದು: 11.00 ಗಂಟೆಗೆ |

ಮೇಲಿನ ದಿನಾಂಕಗಳಂದು ಸಾರ್ವಜನಿಕ ರಜೆಯಿದ್ದಲ್ಲಿ/ಸಾರ್ವಜನಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕವನ್ನು ಪರಿಗಣಿಸಬಹುದು.

4. **ಲಕೋಟೆ ಪದ್ಧತಿ:**

ಕರ್ನಾಟಕ ಸರ್ಕಾರ ಪಾರದರ್ಶಕ ಅಧಿನಿಯಮ-1999 ಮತ್ತು ನಿಯಮಗಳು 2000 ರನ್ವಯ ಟೆಂಡರ್ ಪ್ರಕ್ರಿಯೆಯಲ್ಲಿ ದ್ವಿಲಕೋಟೆ ಪದ್ಧತಿಯನ್ನು ಅಳವಡಿಸಲಾಗಿರುತ್ತದೆ.

## ಲಕೋಟೆ-1

## ತಾಂತ್ರಿಕ ಷರತ್ತುಗಳು ಮತ್ತು ಟೆಂಡರ್ ನಿಬಂಧನೆಗಳು:

1. ಇ.ಎಂ.ಡಿ ರೂ. 145000/- ಗಳನ್ನು ಇ-ಪೋರ್ಟಲ್ ಮೂಲಕ ಪಾವತಿಸಬೇಕು.
2. ಬಿಡ್‌ದಾರರು/ಸಂಸ್ಥೆರವರು ಕಾರ್ಮಿಕ ಇಲಾಖೆಯಲ್ಲಿ ಕನಿಷ್ಠ 150 ನೌಕರರನ್ನು ನೊಂದಣಿ ಮಾಡಿಸಿದ ಪ್ರಮಾಣ ಪತ್ರದ ದೃಢೀಕೃತ ಪ್ರತಿ. ಫಾರಂ-ಸಿ
3. ಕಾರ್ಮಿಕ ಭವಿಷ್ಯನಿಧಿ ನೊಂದಣಿ ಪತ್ರ ಹಾಗೂ 2023-24 2024-25, 2025-26 ಮತ್ತು ಫೆಬ್ರವರಿ-2025 ರ ಅಂತ್ಯದವರೆಗೆ ಕಾರ್ಮಿಕ ಭವಿಷ್ಯ ನಿಧಿ ವಂತಿಗೆ ಸಲ್ಲಿಸಿದ ಪ್ರಮಾಣ ಪತ್ರ.
4. ಪೋಲೀಸ್ ಇಲಾಖೆಯಿಂದ ಪಡೆದ ಖಾಸಗಿ ಭದ್ರತಾ ಸೇವೆಯ ಪರವಾನಗಿ ನೋಂದಣಿ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
5. ಸಂಸ್ಥೆಯ ವಿರುದ್ಧ ಜಿಲ್ಲಾ ಪೋಲೀಸ್ ಇಲಾಖೆಯಲ್ಲಿ ಯಾವುದೇ ಮೊಕದ್ದಮೆ ದಾಖಲಾಗದೇ ಇರುವ ಬಗ್ಗೆ ಮತ್ತು ವಿಚಾರಣೆ ಬಾಕಿ ಇಲ್ಲದೇ ಇರುವ ಬಗ್ಗೆ ಪೋಲಿಸ್ ಆಯುಕ್ತರಿಂದ ಪಡೆದ ಪರಿಶೀಲನಾ ಪ್ರಮಾಣ ಪತ್ರ (Police verification certificate) ಕಡ್ಡಾಯವಾಗಿ ಸಲ್ಲಿಸುವುದು.
6. ಇ.ಎಸ್.ಐ ನೊಂದಣಿ ಪತ್ರ ಹಾಗೂ 2023-24 ರಿಂದ 2025-2026 ಮತ್ತು ಫೆಬ್ರವರಿ-2025 ಅಂತ್ಯದವರೆಗೆ ರ ವಂತಿಗೆ ಪಾವತಿಸಿರುವ ಪ್ರಮಾಣ ಪತ್ರ ದಾಖಲೆ.
7. ಜಿ.ಎಸ್.ಟಿ ನೋಂದಣಿ ಪ್ರಮಾಣ ಪತ್ರ ಹಾಗೂ 2023-24 ರಿಂದ 2025-2026 ಮತ್ತು ಫೆಬ್ರವರಿ-2025 ಜಿ.ಎಸ್.ಟಿ. ಚಲನ್‌ಗಳು.
8. ಸಂಸ್ಥೆಯು 2023-24 ರಿಂದ 2025-2026 ಸಾಲಿಗೆ ಕಾರ್ಮಿಕ ಕಲ್ಯಾಣ ನಿಧಿ ಪಾವತಿಸಿದ ಪ್ರತಿ ಲಗತ್ತಿಸಬೇಕು. ಕನಿಷ್ಠ 150 ಕಾರ್ಮಿಕರಿಗೆ ಪಾವತಿಸಿರಬೇಕು.
9. ವೃತ್ತಿ ತೆರಿಗೆ ನೊಂದಣಿ ಪತ್ರ ಹಾಗೂ 2023-24 ರಿಂದ 2025-2026 ಮತ್ತು ಫೆಬ್ರವರಿ-2025 ಅಂತ್ಯದವರೆಗೆ ವೃತ್ತಿ ತೆರಿಗೆ ಭರ್ತಿ ಮಾಡಿದ ವಂತಿಗೆ ಪ್ರಮಾಣ ಪತ್ರ.
10. 2023-24 ರಿಂದ 2025-2026 ಅಸೆಸ್‌ಮೆಂಟ್ ವರ್ಷಗಳ ಲೆಕ್ಕ ಪತ್ರ ತಪಾಸಣೆ ಮಾಡಿಸಿದ ವರದಿ (CA ರವರಿಂದ)
11. ಹಿಂದಿನ (2023-24 ರಿಂದ 2025-2026 ಅಸೆಸ್‌ಮೆಂಟ್ ವರ್ಷಗಳು) ಪ್ರತಿ ವರ್ಷದ ಟರ್ನ್‌ಓವರ್ ಮೊತ್ತ ರೂ. 2.00ಕೋಟಿ ಮ್ಯಾನ್ ಪವರ್ ವಹಿವಾಟು ಹೊಂದಿದ ಪ್ರಮಾಣ ಪತ್ರ.
12. ಪ್ಯಾನ್ ಕಾರ್ಡ್ ಪ್ರತಿ ಒದಗಿಸುವುದು.
13. ಹಿಂದಿನ (2023-24 ರಿಂದ 2025-2026 ಅಸೆಸ್‌ಮೆಂಟ್ ವರ್ಷಗಳು) 03 ವರ್ಷದ ಆದಾಯ ತೆರಿಗೆ ಭರ್ತಿ ಮಾಡಿದ ಪ್ರಮಾಣ ಪತ್ರ. (ಸಂಸ್ಥೆ ಹೆಸರಿನಲ್ಲಿ ಅಥವಾ ಮಾಲೀಕರ ಹೆಸರಿನಲ್ಲಿರಬೇಕು)
14. ಐ.ಎಸ್.ಓ ಪ್ರಮಾಣ ಪತ್ರ.
15. ಈ ರೀತಿ ಸಿಬ್ಬಂದಿ ಒದಗಿಸಿದ ಬಗ್ಗೆ ಆರೋಗ್ಯ ಇಲಾಖೆಯಿಂದ ತೃಪ್ತಿಕರ ಕಾರ್ಯದ ಪ್ರಮಾಣ ಪತ್ರವನ್ನು ಸಂಸ್ಥೆಗಳ ಮುಖ್ಯಸ್ಥರಿಂದ ಪಡೆದು ಸಲ್ಲಿಸುವುದು.
16. ಸಂಸ್ಥೆಯು ಕನಿಷ್ಠ 3 ವರ್ಷಗಳ ಹಿಂದೆ ನೋಂದಾಯಿಸಿರಬೇಕು.
17. ಸಂಸ್ಥೆಯು ಅಧಿಕೃತವಾಗಿ ಸಂಬಂಧಿಸಿದ ನೋಂದಣಿ ಅಧಿಕಾರಿಯಿಂದ ನೋಂದಾಯಿಸಿರುವ ದಾಖಲೆ (ಕೋ-ಆಪರೇಟಿವ್ ಸೊಸೈಟಿಯಿಂದ ಪಡೆದ ದಾಖಲೆ) ಒದಗಿಸುವುದು
18. ವೇತನ, ತುಟ್ಟಿ ಭತ್ಯೆ, ಇ.ಎಸ್.ಐ ಮತ್ತು ಪಿ.ಎಫ್ ವಂತಿಗೆ, ಸೇವಾ ತೆರಿಗೆ ಸೇವಾ ಶುಲ್ಕ ಇತ್ಯಾದಿ ವಿವರಗಳನ್ನು ಬಿಲ್ಲಿನಲ್ಲಿ ಪ್ರತ್ಯೇಕವಾಗಿ ನಮೂದಿಸಿ ಪಾವತಿಗಾಗಿ ಸಲ್ಲಿಸತಕ್ಕದ್ದು.ಕಾಲಕಾಲಕ್ಕೆ ಕಾರ್ಮಿಕ ಇಲಾಖೆಯ ಪರಿಷ್ಕೃತ ವೇತನ ಪಾವತಿಸಬೇಕಾಗುತ್ತದೆ.
19. ಗ್ರೂಪ್'ಡಿ' ನೌಕರರಿಗೆ ಅವಶ್ಯಕತೆಗೆ ಅನುಗುಣವಾಗಿ ಕುಡಿಯುವ ನೀರು, ಶುಚಿತ್ವದ ಸೌಲಭ್ಯಗಳು, ಎರಡು ಜೊತೆ, ಅಗತ್ಯಕ್ಕೆ ತಕ್ಕಂತೆ ಸಮವಸ್ತ್ರ, ಹ್ಯಾಂಡ್ ಗ್ಲೌಸ್, ಟೋಪಿ, ರಬ್ಬರ್ ಬೂಟ್‌ಗಳು, ಚಪ್ಪಲಿಗಳು, ಶುಚಿಗೊಳಿಸುವ ಸಾಧನಗಳು ಹಾಗೂ ಉಪಕರಣಗಳು,ಕಸಬರಿಕೆ, ತುರಿಮಣೆ (Drain scrappers-18" guage "6X9" collection plate, hand scarappers 16 guage iron sheet "9X4" bended)ಮಾಸ್ಕ್ (Nose mask-dust free resprirtor), ಗಮೇಲ (Ghamela) ಫಿನೈಲ್ ಮತ್ತು ಬ್ಲೀಚಿಂಗ್ ಪೌಡರ್ ಇತ್ಯಾದಿ ವಸ್ತುಗಳು ಮತ್ತು ಸುರಕ್ಷತ ಸಾಮಾಗ್ರಿಗಳನ್ನು ಪ್ರಧಾನ ಮಾಲೀಕರು/ಗುತ್ತಿಗೆದಾರರು ಒದಗಿಸತಕ್ಕದ್ದು.

20. ಹೊರಗುತ್ತಿಗೆ ಸಂಸ್ಥೆಯಿಂದ ನಿಯೋಜಿಸಲ್ಪಡುವ ಎಲ್ಲಾ ನೌಕರರು ಕಡ್ಡಾಯವಾಗಿ ಬಯೋ ಮೆಟ್ರಿಕ್ ಸಿಸ್ಟಮ್‌ನಲ್ಲಿ ಹಾಜರಾತಿಯನ್ನು ನಿಗದಿತ ವೇಳೆಯಲ್ಲಿ ನಮೂದಿಸತಕ್ಕದ್ದು.

21. ಬಿಡ್‌ದಾರರು ಪ್ರತಿ ತಿಂಗಳು 5ನೇ ತಾರೀಖು ಅಥವಾ ಅದಕ್ಕೂ ಮುಂಚೆ ಹಿಂದಿನ ತಿಂಗಳು ತಮ್ಮ ಸಂಸ್ಥೆಯಿಂದ ನೇಮಕವಾಗುವ ನೌಕರರಿಗೆ ವೇತನ ನೀಡಿದ ಬಗ್ಗೆ ದಾಖಲೆ ಒದಗಿಸುವುದು.

22. ತಮ್ಮ ಸಂಸ್ಥೆಯಿಂದ ಅಧೀನ ಆರೋಗ್ಯ ಸಂಸ್ಥೆಗಳಗೆ ನಿಯೋಜಿಸುವ ಸಿಬ್ಬಂದಿಯ ಹುದ್ದೆ, ಪೂರ್ಣ ವಿಳಾಸ/ಖಾಯಂ ವಿಳಾಸ, PF, ESI ನೋಂದಣಿ ವಿವರಗಳನ್ನು ಕಡ್ಡಾಯವಾಗಿ ನೇಮಕವಾದ ಒಂದು ವಾರದೊಳಗೆ ಸಿಬ್ಬಂದಿಯವರಿಗೆ ನೀಡಿ ಈ ಕಛೇರಿಗೆ ಮಾಹಿತಿ ನೀಡತಕ್ಕದ್ದು.

23. PF, ESI, IT ಇತ್ಯಾದಿ ಕಾನೂನು ಬದ್ಧ ಪಾವತಿಗಳನ್ನು ಮತ್ತು ಪ್ರತಿಯೊಬ್ಬ ನೌಕರನ/ಳ ಪಿ.ಎಫ್ ಖಾತೆ ಸಂಖ್ಯೆಯನ್ನು ಏಜೆನ್ಸಿಯವರು ಹಿಂದಿನ ತಿಂಗಳ ಬಿಲ್‌ನೊಂದಿಗೆ ತಪ್ಪದೇ ಸಂಬಂಧಿಸಿದ ಕಛೇರಿಗೆ ಸಲ್ಲಿಸತಕ್ಕದ್ದು.

**24.** ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು ಇವರ ಹೆಸರಿನಲ್ಲಿ ಟೆಂಡರ್ **ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಮತ್ತು ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕದ ಒಳಗಿನ ಅವಧಿಯಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ರೂ.578680/- ಲಕ್ಷಗಳ ಬ್ಯಾಂಕರ್ ಚೆಕ್ ಪಡೆದು ಕಡ್ಡಾಯವಾಗಿ ಸಲ್ಲಿಸಬೇಕು**.

25. ಇ.ಪಿ.ಎಫ್. ಸಂಸ್ಥೆಯಲ್ಲಿ ಸುಸ್ತಿದಾರರಾಗಿರುವುದು ಕಂಡು ಬಂದಲ್ಲಿ ಇವರ ಬಿಡ್‌ನ್ನು ಪರಿಗಣಿಸುವುದಿಲ್ಲ ಹಾಗೂ ಇ.ಪಿ.ಎಫ್ ಇಲಾಖೆಯಿಂದ ತೀರುವಳಿ ಪ್ರಮಾಣ ಪತ್ರ ಸಲ್ಲಿಸುವುದು.

26. ಹೊರಗುತ್ತಿಗೆ ಮೇಲೆ ನೌಕರರನ್ನು ಪಡೆದುಕೊಳ್ಳುವ ಮೊದಲು ಆ ನೌಕರನು/ಳ ಅರ್ಹ ವಿದ್ಯಾರ್ಹತೆಯನ್ನು ಹೊಂದಿ ಸಮರ್ಥನಾಗಿರುತ್ತಾನೆಂದು ಖಾತ್ರಿ ಪಡಿಸಿಕೊಳ್ಳತಕ್ಕದ್ದು.

27. ಟೆಂಡರ್‌ದಾರರು ಸಲ್ಲಿಸಿರುವ ಎಲ್ಲಾ ತಾಂತ್ರಿಕ ದಾಖಲಾತಿಗಳ ಸಿಂಧುತ್ವದ ಅವಧಿ ಚಾಲ್ತಿಯಲ್ಲಿರಬೇಕು ಈ ಮೇಲಿನ ದಾಖಲೆಗಳು ಹಾಗೂ ಚಲನ್ ಪ್ರತಿಗಳು ಮತ್ತು ತೀರುವಳಿ ಸಲ್ಲಿಸಿರುವ ಎಲ್ಲಾ ಪ್ರಮಾಣ ಪತ್ರದ ದಾಖಲೆಯನ್ನು ನೋಟರಿಯವರಿಂದ ಧೃಡಿಕರಿಸಿರಬೇಕು.

28. ಆಯ್ಕೆಯಾಗುವ ಹೊರಗುತ್ತಿಗೆ ಏಜೆನ್ಸಿಯವರು ನೌಕರರನ್ನು ಒದಗಿಸುವ ಆಸ್ಪತ್ರೆಗಳಗೆ ಮತ್ತು ಆರೋಗ್ಯ ಸಂಸ್ಥೆಗಳಗೆ ಪ್ರತಿ ತಿಂಗಳು ಬಿಲ್ ಸಲ್ಲಿಸತಕ್ಕದ್ದು, ನೌಕರರ ವೇತನವನ್ನು ಸಂಬಂಧಪಟ್ಟ ಆಡಳಿತ ವೈದ್ಯಾಧಿಕಾರಿಗಳು ಸಾದಿಲ್ವಾರು ಬಿಲ್ಲಿನಲ್ಲಿ ಆಯಾ ತಾಲ್ಲೂಕಿನ ಖಜಾನೆ ಮೂಲಕ ಹಣ ಸೆಳೆದು ನೇರವಾಗಿ ಏಜೆನ್ಸಿಯವರ ಖಾತೆಗೆ ಜಮೆ ಮಾಡಲಾಗುವುದು. ಏಜೆನ್ಸಿಯವರು ಸಹ ತಮ್ಮ ಸಂಸ್ಥೆಯಿಂದ ನೇಮಕ ಮಾಡುವ ನೌಕರರಿಗೆ ಬ್ಯಾಂಕ್ ಖಾತೆಯ (ಆರ್.ಟಿ.ಜಿ.ಎಸ್) ಮೂಲಕವೇ ವೇತನವನ್ನು ಪಾವತಿಸಲು ಕ್ರಮ ವಹಿಸುವುದು.

29. ಅನುದಾನದ ಕೊರತೆ ಹಾಗೂ ಆಡಳಿತಾತ್ಮಕ ಕಾರಣದಿಂದ ಏಜೆನ್ಸಿಯವರಿಗೆ ಬಿಲ್ಲು ಪಾವತಿ ವಿಳಂಬವಾದಲ್ಲಿ ಕಾಯಲು ಸಿದ್ಧರಿರಬೇಕು. ಈ ಕಾರಣದಿಂದ ಸಿಬ್ಬಂದಿಗೆ ವೇತನವನ್ನು ತಡೆಹಿಡಿಯುದಿಲ್ಲವೆಂದು ಛಾಪಾ ಕಾಗದದ ಮೇಲೆ ನೋಟರಿಯವರಿಂದ ಪ್ರಮಾಣ ಪತ್ರ ಪಡೆದು ಕಡ್ಡಾಯವಾಗಿ ನೀಡತಕ್ಕದ್ದು.

30. ಕೇಳಲಾದ ತಾಂತ್ರಿಕ ದಾಖಲೆಗಳನ್ನು ಮಾತ್ರ ಸಲ್ಲಿಸತಕ್ಕದ್ದು, ಅನಗತ್ಯವಾದ ದಾಖಲೆಗಳನ್ನು ಅಪ್‌ಲೋಡ್ ಮಾಡಿದ್ದಲ್ಲಿ ಅಂತಹ ಟೆಂಡರ್‌ಗಳನ್ನು ಪ್ರಾರಂಭದಲ್ಲಿಯೇ ತಿರಸ್ಕರಿಸಲಾಗುವುದು.

31. ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರು ಟೆಂಡರುದಾರರ ಟೆಂಡರುಗಳನ್ನು ಮಂಜೂರು ಮಾಡುವ ಮತ್ತು ತಿರಸ್ಕರಿಸುವ ಅಧಿಕಾರ ಹೊಂದಿರುತ್ತಾರೆ.

32. ಮ್ಯಾನ್ ಪವರ್ ಏಜೆನ್ಸಿಯವರು, ತರಬೇತಿ ಹೊಂದಿದ Skilled& ಅರ್ಹ ಅಭ್ಯರ್ಥಿಗಳನ್ನು ಒದಗಿಸುವುದು.

33. ಇದು ಸೇವಾ ಶುಲ್ಕ ಆಧಾರಿತ ಗುತ್ತಿಗೆಯ ಟೆಂಡರ್ ಆಗಿದೆ, ಏಜೆನ್ಸಿಯ ಸಿಬ್ಬಂದಿಗೂ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿಕ್ಕಬಳ್ಳಾಪುರ ಇವರಿಗೂ ನೇರ ಸಂಭಂಧವಿರುವುದಿಲ್ಲ ಮತ್ತು ಗುತ್ತಿಗೆಧಾರರಿಂದ ನೇಮಿಸಲ್ಪಡುವ ನೌಕರರಿಗೂ ತಂಟೆ. ತಕರಾರು, ವ್ಯಾಜ್ಯಗಳು ಉದ್ಭವಿಸಿದಲ್ಲಿ ಗುತ್ತಿಗೆ ನೌಕರರಿಗು ಮತ್ತು ಇಲಾಖೆಗೂ ಯಾವುದೇ ಸಂಬಂಧ ಇರುವುದಿಲ್ಲ.

34. ಕಚೇರಿಗಳಲ್ಲಿ ಗುತ್ತಿಗೆ ನೌಕರರ ನಿರ್ಲಕ್ಷ್ಯದಿಂದ ಉಂಟಾಗುವ ಕಳವು, ಆಸ್ತಿ ನಷ್ಟ, ಅಹಿತಕರ ಘಟನೆ ಮುಂತಾದವುಗಳಗೆ ಅವರನ್ನು (ಗುತ್ತಿಗೆದಾರ) ಜವಾಬ್ದಾರರನ್ನಾಗಿ ಮಾಡಿ ಅವಶ್ಯವೆನಿಸಿದಲ್ಲಿ ಈ ಸಂಭಂಧದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಮತ್ತು ಸಮಿತಿಯ ಸದಸ್ಯರು ನಿಗಧಿಪಡಿಸುವ ಮೊತ್ತದ ಪರಿಹಾರವನ್ನು ಗುತ್ತಿಗೆದಾರರಿಂದ ವಸೂಲು ಮಾಡಲಾಗುವುದು. ನಿಯೋಜಿಸುವ ಸಿಬ್ಬಂದಿಯು ನೇರವಾಗಿ ಗುತ್ತಿಗೆದಾರರ ನೌಕರರಾಗಿರುತ್ತಾರೆ. ಕಾರ್ಮಿಕ ಇಲಾಖೆಯ ಕಾನೂನಿನನ್ವಯ ಸಿಬ್ಬಂದಿಗೆ ಎಲ್ಲಾ ಸವಲತ್ತುಗಳನ್ನು ನೀಡುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ.

35. ಮೊಹರಾದ ಟೆಂಡರಿನ ಲಕೋಟೆಯನ್ನು ತೆರೆಯುವ ಮೊದಲು ಇಷ್ಟವೆನಿಸಿದರೆ ಟೆಂಡರ್‌ನ್ನು ಹಿಂಪಡೆದು ಟೆಂಡರ್ ಪ್ರಕ್ರಿಯೆಯಿಂದ ಹೊರಗುಳಯಬಹುದು. ಮುಂಗಡ ಠೇವಣಿಯ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ಕೊಡಲಾಗುವುದಿಲ್ಲ.

36. ಇ-ಟೆಂಡರ್ ಅಂಗೀಕೃತವಾದ ಕೂಡಲೇ ಸಂಬಂಧಪಟ್ಟ ಸಂಸ್ಥೆಗೆ ಮೌಖಿಕ/ಲಿಖಿತ ಮೂಲಕ ತಿಳಿಸಲಾಗುವುದು ಯಶಸ್ವಿ ಟೆಂಡರ್‌ದಾರರು ತಕ್ಷಣ ಅಂದರೆ 07 ದಿನಗಳ ಒಳಗಾಗಿ ರೂ. 200/- ಗಳ ಸ್ಟಾಂಪ್ ಪೇಪರ್ ಮೇಲೆ ಗುತ್ತಿಗೆ ಸಂಬಂಧದ ಒಪ್ಪಂದ ಕರಾರು ಪತ್ರವನ್ನು ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು ರವರಹೆಸರಿನಲ್ಲಿ ನೀಡಿ ನೇಮಕಾತಿ ಕಾರ್ಯವನ್ನು ಸಂಪೂರ್ಣ ಪ್ರಮಾಣದಲ್ಲಿ ಪ್ರಾರಂಭಿಸತಕ್ಕದ್ದು. ತಪ್ಪಿದ್ದಲ್ಲಿ ವಿಳಂಬವಾದ ಪ್ರತಿ ದಿನಕ್ಕೆ ರೂ. 200/- ರಂತೆ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮುಂದಿನ ಹತ್ತಿರದ ಟೆಂಡರ್‌ದಾರರಿಗೆ ನೀಡಲಾಗುವುದು.

37. ಗುತ್ತಿಗೆ ಅವಧಿಯಲ್ಲಿ ಸಂಭವಿಸುವ ಕಳವು ನಷ್ಟಗಳ ಮತ್ತು ಘಟಿಸುವ ಅಹಿತಕರ ಘಟಣೆಗಳ ಸಂಬಂಧದಲ್ಲಿ ಗುತ್ತಿಗೆದಾರರಿಂದ ವಸೂಲು ಮಾಡಬೇಕಾಗಿರುವ ಮೊತ್ತವನ್ನು ಭದ್ರತಾ ಠೇವಣಿಯಿಂದ ಮುರಿದುಕೊಳ್ಳಲಾಗುವುದು. ಗುತ್ತಿಗೆ ಅವಧಿಯಲ್ಲಿ ಮುನ್ಸೂಚನೆ ನೀಡದೆ ಕಾರ್ಯವನ್ನು ನಿಲ್ಲಿಸಿದರೆ ಅಥವಾ ಆ

ಕಾರ್ಯಕ್ಕೆ ತೊಂದರೆ ಉಂಟಾಗುವಂತೆ ನಡೆದುಕೊಂಡರೆ ಭದ್ರತಾ ಠೇವಣಿ ಮುಟ್ಟುಗೋಲುಹಾಕಿಕೊಂಡು ಹೊರಗುತ್ತಿಗೆ ಸೇವೆಗೆ ಅವಶ್ಯ ಪರ್ಯಾಯ ವ್ಯವಸ್ಥೆಯಿಂದ ಆದ ಹಾನಿಯನ್ನು ಗುತ್ತಿಗೆದಾರರಿಂದ ವಸೂಲು ಮಾಡಲಾಗುವುದು. ಗುತ್ತಿಗೆದಾರರು ನೌಕರರಿಗೆ ಉಚಿತ ನೇಮಕಾತಿ ಆದೇಶವನ್ನು ನೀಡಿ ಸೇವೆಗೆ ಕಡ್ಡಾಯವಾಗಿ ನಿಯೋಜಿಸಿದವರನ್ನು ಮಾತ್ರ ಪರಿಗಣಿಸಲಾಗುವುದು.

38. ಕಾರ್ಯದೇಶ ನೀಡಿದ ತಕ್ಷಣ ಭದ್ರತಾ ಠೇವಣಿಯಾಗಿ,ಟೆಂಡರ್ ಮೊತ್ತದ ಶೇ.10% ರಷ್ಟು ಟೆಂಡರ್‌ದಾರರು ಡಿ.ಡಿ ಮೂಲಕ ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು ರವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು. ಭದ್ರತಾ ಠೇವಣಿಯನ್ನು ಗುತ್ತಿಗೆ ಅವಧಿ ಮುಗಿದ ನಂತರ ಹಿಂತಿರುಗಿಸಲಾಗುವುದು.

39. ಇ-ಟೆಂಡರ್‌ನಲ್ಲಿ ಭಾಗವಹಿಸುವ ಸಂಸ್ಥೆಗಳು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದು ವಾರ್ಷಿಕ ವಹಿವಾಟು ಟೆಂಡರ್ ಮೊತ್ತದ ಶೇಕಡ 50% ರಷ್ಟು ಇರಬೇಕು. ಸಂಸ್ಥೆಯು ಸಿಬ್ಬಂದಿಗೆ ಸೂಕ್ತ ಸಮಯದಲ್ಲಿ ವೇತನವನ್ನು ನೀಡುವ ಶಕ್ತಿಯನ್ನು ಹೊಂದಿರತಕ್ಕದ್ದು.

40. ಬಾಹ್ಯ ಹೊರ ಸಂಪನ್ಮೂಲ ಏಜೆನ್ಸಿಯು (ಹೊರಗುತ್ತಿಗೆ ಆಧಾರದ ಮೇಲೆ) ಈ ಹಿಂದೆ ಎಲ್ಲೆಲ್ಲಿ ಸೇವೆ ಸಲ್ಲಿಸಿದೆ ಎಂಬ ಬಗ್ಗೆ ದೃಢೀಕರಣ ಪತ್ರ ಸಲ್ಲಿಸುವುದು.

41. ಪ್ರತಿ ತಿಂಗಳು 05 ನೇ ತಾರೀಖಿನೊಳಗೆ ಹಿಂದಿನ ತಿಂಗಳ ಬಿಲ್ಲನ್ನು ತಯಾರಿಸಿ ಸಿಬ್ಬಂದಿಗಳ ಹಾಜರಾತಿ ದೃಢೀಕರಣದೊಂದಿಗೆ ಸಂಬಂಧಿಸಿದ ಕಛೇರಿಗೆ ಸಲ್ಲಿಸತಕ್ಕದ್ದು, ಅದಕ್ಕಿಂತ ಮುಂಚಿನ ತಿಂಗಳಿಗೆ ESI, PF ಮತ್ತು ಸೇವಾ ತೆರಿಗೆ ಹಣವನ್ನು ಆಯಾ ಇಲಾಖೆಗಳಿಗೆ ಪಾವತಿಸಿದ್ದಕ್ಕೆ ಧೃಢೀಕರಣ ಪತ್ರ ಮತ್ತು ಪಾವತಿಸಿದ ಚಲನ್ ಪ್ರತಿಯನ್ನು ಪ್ರತಿ ನೌಕರರ ಬಾಬ್ತು ಪಾವತಿಸಿದ ವಿವರದ ಪಟ್ಟಿಯೊಂದಿಗೆ ಸಲ್ಲಿಸತಕ್ಕದ್ದು. ಸಿಬ್ಬಂದಿಗಳಿಗೆ ಹಿಂದಿನ ತಿಂಗಳಲ್ಲಿ ನೀಡಿದ ವೇತನದ ವಿವರಗಳನ್ನು ಅವರಿಂದ ಸಹಿ ಪಡೆದು ಸಂಬಂಧಪಟ್ಟ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು. (ಅಕ್ವಿಟೆನ್ಸ್/ವೇತನ ವಹಿಯ ಪ್ರತಿ).

42. ಅಂಗೀಕೃತವಾದ ದರಕ್ಕಿಂತ ಹೆಚ್ಚುವರಿ ದರಕ್ಕೆ ಟೆಂಡರ್‌ದಾರರಿಂದ ಯಾವ ಮನವಿ ಪತ್ರವನ್ನು ಯಾವುದೇ ಕಾಲದಲ್ಲಿ ಸ್ವೀಕರಿಸುವುದಿಲ್ಲ.

43. ಟೆಂಡರ್ ಅವಧಿಯಲ್ಲಿ ಯಾವ ಮುಂಗಡವನ್ನೂ ನೀಡುವುದಿಲ್ಲ.

44. ಕಾರ್ಮಿಕ ಇಲಾಖೆಗಳ ಕಾಯಿದೆಯಂತೆ ಎಲ್ಲಾ ಸೌಲಭ್ಯಗಳನ್ನು ನೀಡುವುದು ಗುತ್ತಿಗೆದಾರರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಇದಕ್ಕೆ ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು ರವರು ಜವಾಬ್ದಾರಿಯಾಗಿರುವುದಿಲ್ಲ.

45. ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸುತ್ತಿದ್ದು, ಟೆಂಡರ್‌ದಾರರು ನೇಮಿಸುವ ಅಧಿಕಾರಿ ಮತ್ತು ನೌಕರರು ಸರ್ಕಾರದವರು ಖಾಯಂ ಪಡಿಸಿಕೊಳ್ಳುವಂತೆ ಕೋರ್ಟಿಗೆ ಹೋಗುವಂತಿಲ್ಲ.

46. ಟೆಂಡರ್ ಕುರಿತು ಯಾವುದೇ ವ್ಯಾಜ್ಯ ತಂಟೆ, ತಕರಾರು ಉಂಟಾದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ನ್ಯಾಯಾಲಯದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

47. Responsive ಟೆಂಡರ್‌ದಾರರು ಸೂಚಿಸುವ ಗುತ್ತಿಗೆ ಧರದಲ್ಲಿ ಇಬ್ಬರು ಅಥವಾ ಹೆಚ್ಚಿನ ಗುತ್ತಿಗೆದಾರರು ಒಂದೇ ದರ ಸೂಚಿಸಿದಲ್ಲಿ ಅವರ ಪೂರ್ವ ಕಾರ್ಯ ನಿರ್ವಹಣಾ ವರದಿ ಪರಿಶೀಲಿಸಿ ಹೆಚ್ಚಿನ ಅರ್ಹತೆಯಿರುವ ಟೆಂಡರ್‌ದಾರರನ್ನು ಪರಿಗಣಿಸಲಾಗುವುದು ಹಾಗೂ ಅತೀ ಕಡಿಮೆ ಧರದ ಟೆಂಡರ್‌ನ್ನು ಒಪ್ಪದೇ ಪ್ರತಿಷ್ಠಿತ ಅಥವಾ ವಿಶ್ವಾಸಾರ್ಹವೆನಿಸುವ ಸಂಸ್ಥೆಗೆ ಗುತ್ತಿಗೆಯನ್ನು ವಹಿಸಿಕೊಡುವ ಹಕ್ಕನ್ನು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ರವರು ಕಾಯ್ದಿರಿಸಿಕೊಳ್ಳಲಾಗಿದೆ.

48. ಸೇವಾವಧಿಯಲ್ಲಿ ತೃಪ್ತಿಕರವಾಗಿ ಕಾರ್ಯನಿರ್ವಹಿಸದಿದ್ದರೆ ಟೆಂಡರ್‌ನ್ನು ತಕ್ಷಣವೇ ರದ್ದುಪಡಿಸಲಾಗುವುದು ಮತ್ತು ಸಂಸ್ಥೆಯ ಹೆಸರನ್ನು ಕಪ್ಪುಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡಲಾಗುವುದು ಮತ್ತು ಮರು ಟೆಂಡರ್ ಕರೆದು ಇತ್ಯರ್ಥಗೊಳ್ಳುವವರೆಗೆ ನೇರವಾಗಿ ಆದ್ಯತೆಯ ಮೇರೆಗೆ ಇತರೆ ಟೆಂಡರ್‌ದಾರರಿಗೆ ಗುತ್ತಿಗೆ ನೀಡಲಾಗುವುದು ಈ ವ್ಯತ್ಯಾಸದ ಹಣವನ್ನು ಕೆಲಸ ನಿರ್ವಹಿಸದಿರುವ ಟೆಂಡರ್‌ದಾರರಿಂದ ವಸೂಲು ಮಾಡಲಾಗುವುದು.

49. ಗುತ್ತಿಗೆದಾರರು ಯಾವುದೇ ಸಂಧರ್ಭದಲ್ಲಿಯೂ ಈ ಕಛೇರಿಯ ಸಿಬ್ಬಂದಿಯನ್ನು ಕರ್ತವ್ಯದ ಮೇಲೆ ಹಾಜರಿದ್ದಾಗ, ರಜೆಯ ಮೇಲಿದ್ದಾಗ ಅಥವಾ ಅಮಾನತ್ತಿನಲ್ಲಿ/ಗೈರುಹಾಜರಿಯಲ್ಲಿ ಇದ್ದಾಗಲಾಗಲೀ ನೇಮಕಾತಿ ಮಾಡಿಕೊಳ್ಳಬಾರದು.

50. ಈ ಕಛೇರಿಯ ಖಾಯಂ ಸಿಬ್ಬಂದಿಗೆ ಸರ್ಕಾರದಿಂದ ಕೊಡುವ ಯಾವುದೇ ಸೇವಾ ಸವಲತ್ತುಗಳನ್ನು ಗುತ್ತಿಗೆದಾರರ ಸಿಬ್ಬಂದಿಗೆ ನೀಡಲಾಗುವುದಿಲ್ಲ.

51. ಟೆಂಡರುಗಳ ಮೊತ್ತವನ್ನು ತಿದ್ದಬಾರದು ತಪ್ಪಾಗಿದ್ದಲ್ಲಿ ಅದನ್ನು ಒಡೆದುಹಾಕಿದ ಪಕ್ಷದಲ್ಲಿ ಸರಿಯಾದ ಮೊತ್ತವನ್ನು ಬರೆದು ಸಹಿ ಮಾಡಬೇಕು. ತಪ್ಪಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು ಮೊತ್ತವನ್ನು ಅಕ್ಷರಗಳಲ್ಲಿಯೂ ಸಹಾ ಬರೆಯಬೇಕು.

52. ಗುತ್ತಿಗೆ ಮೊತ್ತದ ಪಾವತಿಯು ಆಡಳಿತಾತ್ಮಕ ಅಥವಾ ಬೇರಾವುದೇ ಕಾರಣದಿಂದ ವಿಳಂಬವಾದರೆ ಗುತ್ತಿಗೆದಾರರು ಈ ಬಗ್ಗೆ ಬಡ್ಡಿಯನ್ನು ಕ್ಲೇಮು ಮಾಡಲು ಅವಕಾಶವಿರುವುದಿಲ್ಲ.

53. ಮೇಲ್ಕಂಡ ಟೆಂಡರ್ ನಿಬಂಧನೆಗಳಲ್ಲದೇ ಟೆಂಡರ್‌ದಾರರು ತಮ್ಮದೇ ಆದ ಟೆಂಡರ್ ನಿಭಂಧನೆಗಳನ್ನು ಸೂಚಿಸಿದಲ್ಲಿ (Conditional Tenders) ಟೆಂಡರ್‌ನ್ನು ಸ್ವಯಂ ತಿರಸ್ಕೃತ ಎಂದು ಭಾವಿಸಲಾಗುವುದು.
54. ಒಪ್ಪಂದ ಮಾಡಿಕೊಂಡ ನಿಗಧಿತ ಅವಧಿಯೊಳಗೆ ಒಪ್ಪಂದದ ಪ್ರಕಾರ ಸಂಪೂರ್ಣ ಪ್ರಮಾಣದಲ್ಲಿ ಸೇವೆಯನ್ನು ಪ್ರಾರಂಭಿಸದಿದ್ದಲ್ಲಿ ಅಂತಹ ಸಂಸ್ಥೆಯ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿ ಕೊಳ್ಳಲಾಗುವುದು, ಪ್ರಾರಂಭಿಸಿದ ಕಾರ್ಯವು ತೃಪ್ತಿಕರವಾಗಿರದಿದ್ದಲ್ಲಿ ಮುಂದಿನ ಒಂದು ತಿಂಗಳ ನೋಟೀಸ್ ಕೊಡುವುದರ ಮೂಲಕ ಸಮಾಪ್ತಿಗೊಳಿಸಲು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ರವರು ಅಧಿಕಾರ ಹೊಂದಿರುತ್ತಾರೆ.
55. ವಿವಿದ ಸೇವೆಗಳಿಗೆ ಪಡೆಯುವ ನೌಕರರನ್ನು ಆಗಿಂದಾಗ್ಗೆ ಬದಲಾಯಿಸಕೂಡದು. ಒಂದು ವೇಳೆ ಅಭ್ಯರ್ಥಿಯು ದುರ್ನಡತೆಯಿಂದ ಸಂಸ್ಥೆಯೊಂದಿಗೆ ವರ್ತಿಸಿದ್ದರೆ ಅಂತಹವರನ್ನು ಗುತ್ತಿಗೆದಾರರು ಬದಲಾಯಿಸಿ ಮತ್ತೊಬ್ಬ ನುರಿತ ಅಭ್ಯರ್ಥಿಯನ್ನು ನೇಮಕಮಾಡುವುದು, ಇದಕ್ಕೂ ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು ರವರಿಗೂ ಸಂಬಂಧವಿರುವುದಿಲ್ಲ.
56. ಟೆಂಡರ್‌ನೊಂದಿಗೆ ಸಲ್ಲಿಸಿದ ಯಾವುದಾದರೂ ದಾಖಲೆಗಳು ನಕಲಿ ಎಂದು ಕಂಡು ಬಂದಲ್ಲಿ ಅರ್ಜಿಯೊಂದಿಗೆ ಸಲ್ಲಿಸಿದ ಭದ್ರತಾ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಸದರಿ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡಲಾಗುವುದು.
57. ಆಯ್ಕೆಯಾಗುವ ಏಜೆನ್ಸಿಯವರು ತಮ್ಮ ಸಂಸ್ಥೆಯಿಂದ ನೇಮಕ ಮಾಡುವ ನೌಕರರಿಗೆ ಬ್ಯಾಂಕ್ ಖಾತೆಯ ಮೂಲಕವೇ ವೇತನವನ್ನು ಪಾವತಿಸಲು ಕ್ರಮ ವಹಿಸುವುದು.
58. ಈ ಟೆಂಡರ್ ಅಧಿಸೂಚನೆಯಲ್ಲಿ ನಮೂದಿಸಿರುವ ಜೀವನ ನಿರ್ವಹಣಾ ಭತ್ಯೆ ದರಗಳನ್ನು ಸರ್ಕಾರವು ದಿನಾಂಕ: 01.04.2026 ರಿಂದ 2026 ನೇ ಸಾಲಿನ ಬೆಲೆ ಸೂಚ್ಯಂಕ ದರಗಳನ್ನು ಆಧಾರಿಸಿ ಹೆಚ್ಚಾಗುವ ಜೀವನ ನಿರ್ವಹಣಾ ಭತ್ಯೆಯನ್ನು ಪಾವತಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
59. ನೌಕರರ ಸಂಖ್ಯೆಯನ್ನು ಹೆಚ್ಚು ಕಡಿಮೆ ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಹೊಂದಿರುತ್ತಾರೆ.
60. ಕೇಂದ್ರ/ರಾಜ್ಯ ಸರ್ಕಾರದಿಂದ ಕಾಲ ಕಾಲಕ್ಕೆ ನಿಗದಿಪಡಿಸುವ ಕನಿಷ್ಟ ವೇತನ ದರಗಳನ್ನು ಪಾವತಿಸುವ ಮತ್ತು ಶಾಸನಬದ್ಧ ವಂತಿಗೆ ಮತ್ತು ತೆರಿಗೆಗಳನ್ನು ಪರಿಷ್ಕರಿಸುವ ದರಗಳನ್ನು ಪಾವತಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
61. ಟೆಂಡರ್‌ನ ಈ ಮೇಲಿನ ಷರತ್ತುಗಳನ್ನು ಪೂರೈಸದೆ ಹೋದಲ್ಲಿ ಏಜೆನ್ಸಿಯ ಒಪ್ಪಂದವನ್ನು ರದ್ದುಗೊಳಿಸಲಾಗುವುದು.
62. ಕಾರ್ಯಾದೇಶ ನೀಡಿದ ನಂತರ ಸಂಸ್ಥೆಯವರು ನೇಮಿಸುವ ಸಿಬ್ಬಂದಿಗಳು ಕನಿಷ್ಟ 18 ವರ್ಷ ಗರಿಷ್ಟ 40 ವರ್ಷ ಮೀರಿರಬಾರದು ಹಾಗೂ ಗ್ರೂಪ್ ಡಿ ಸಿಬ್ಬಂದಿಗಳು ತಪ್ಪದೇ 10 ನೇ ತರಗತಿ ಉತ್ತೀರ್ಣರಾಗಿರಬೇಕು.

**ವಿಶೇಷ ಸೂಚನೆ: ಟೆಂಡರ್‌ನಲ್ಲಿ ಕೇಳಲಾದ ದಾಖಲೆಗಳನ್ನು ಓದಲು ಸಾಧ್ಯವಾಗುವ ತಾಂತ್ರಿಕ ದಾಖಲೆಗಳನ್ನು ಮಾತ್ರ ಈ-ಪ್ರೊಕ್ಯೂರ್‌ಮೆಂಟ್‌ಪೋರ್ಟಲ್‌ನಲ್ಲಿ ಪುಟ ಸಂಖ್ಯೆ ಸಮೇತ ಅಪ್ಲೋಡ್ ಮಾಡತಕ್ಕದ್ದು, ಟೆಂಡರ್‌ದಾರರು ಇ-ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಿರುವ ತಾಂತ್ರಿಕ ದಾಖಲೆಗಳ ಮೂಲ ಪ್ರತಿಗಳನ್ನು ಜಿಲ್ಲಾಧಿಕಾಗಳು/ಜಿಲ್ಲಾ ಆ.ಕು.ಕ.ಅಧಿಕಾರಿಗಳು ಪರಿಶೀಲಿಸಿ ಅಸಲಿ ದಾಖಲೆಗಳು ಎಂದು ಕಂಡು ಬಂದಲ್ಲಿ ಮಾತ್ರ ಅಂತಹವರ ಟೆಂಡರ್‌ನ್ನು ಮಾನ್ಯ ಮಾಡಲಾಗುವುದು. ನಕಲಿ ದಾಖಲೆಗಳನ್ನು ಸಲ್ಲಿಸಿರುವುದು ಕಂಡು ಬಂದಲ್ಲಿ ಅಂತಹ ಸಂಸ್ಥೆಯ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಮತ್ತು ಸಂಸ್ಥೆಯನ್ನು ಕಪ್ಪುಪಟ್ಟಿಗೆ ಸೇರಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು.**

**ಆಡಳಿತ ವೈದ್ಯಾಧಿಕಾರಿ**
ಸಾರ್ವಜನಿಕ ಹಾಗೂ ತಾಯಿ ಮತ್ತು
ಮಕ್ಕಳ ಆಸ್ಪತ್ರೆ ಗೌರಿಬಿದನೂರು

# ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ, ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು ತಾಲ್ಲೂಕು, ಗೌರಿಬಿದನೂರು

**ದೂರವಾಣಿ ಸಂಖ್ಯೆ: 08155 – 286550** **ಇ–ಮೇಲ್ ವಿಳಾಸ:**

amoghgbnr123@gmail.com

**ಲಕೋಟೆ–01**

**ತಾಂತ್ರಿಕ ಬಿಡ್ ಚೆಕ್ ಲಿಸ್ಟ್**

**ಲಕೋಟೆ–1 ರ ಚೆಕ್‌ಲಿಸ್ಟ್ (ತಾಂತ್ರಿಕ ಬಿಡ್‌ನಲ್ಲಿ ಸಲ್ಲಿಸಬೇಕಾದ ದಾಖಲೆಗಳ ಚೆಕ್‌ಲಿಸ್ಟ್)**

| ಕ್ರ.ಸಂ | ಟೆಂಡರ್ ಷರತ್ತುಗಳು | ಇದೆ/ಇಲ್ಲ |
|---|---|---|
| 1 | ಬಿಡ್‌ದಾರರು/ಸಂಸ್ಥೆರವರು ಇ.ಎಂ.ಡಿ. ರೂ.1,45,000/–ಗಳನ್ನು ಇ–ಪೋರ್ಟಲ್ ಮೂಲಕ ಪಾವತಿಸಿರುವ ದಾಖಲೆಯನ್ನು ಸಲ್ಲಿಸುವುದು. | |
| 2 | ಬಿಡ್‌ದಾರರು/ಸಂಸ್ಥೆರವರು ವ್ಯಕ್ತಿಯೆ ಅಥವಾ ಸಂಸ್ಥೆಯೆ ಸಂಸ್ಥೆ ಆಗಿದ್ದಲ್ಲಿ ನೊಂದಣಿ ವಿವರಗಳು ಹಾಗೂ ಅದರ ಪ್ರತಿಗಳನ್ನು ಲಗತ್ತಿಸಬೇಕು. ಕಡ್ಡಾಯವಾಗಿ ಕನಿಷ್ಠ 3 ವರ್ಷಗಳು ಅಂದರೆ ಆರ್ಥಿಕ ವರ್ಷಗಳಾದ 2023–24 ರಿಂದ 2025–2026 ನೇ ಸಾಲಿನಲ್ಲಿ ಸಂಸ್ಥೆಯು ಒಂದೆ ಸಂಸ್ಥೆಯ ಹೆಸರಿನಲ್ಲಿರಬೇಕು ಹಾಗೂ ಬಿಡ್‌ದಾರರು ಅದೆ ಸಂಸ್ಥೆಯ ಹೆಸರಿನಲ್ಲಿ ಇರುವ ಒಂದೆ ಪ್ಯಾನ್ ಸಂಖ್ಯೆಯನ್ನು ಹೊಂದಿರಬೇಕು. | |
| 3 | ಬಿಡ್‌ದಾರರು/ಸಂಸ್ಥೆರವರು ಕಾರ್ಮಿಕ ಇಲಾಖೆಯಲ್ಲಿ ಕನಿಷ್ಠ 150 ನೌಕರರನ್ನು ನೊಂದಣಿ ಮಾಡಿಸಿದ ಪ್ರಮಾಣ ಪತ್ರದ ದೃಢೀಕೃತ ಪ್ರತಿ. ಫಾರಂ–ಸಿ | |
| 4 | ಬಿಡ್‌ದಾರರು/ಸಂಸ್ಥೆರವರು ಕಾರ್ಮಿಕ ಭವಿಷ್ಯ ನಿಧಿ ನೋಂದಣಿ ಪ್ರಮಾಣ ಪತ್ರ ಹಾಗೂ 2023–24 ರಿಂದ 2025–2026 ಆರ್ಥಿಕ ವರ್ಷಗಳಲ್ಲಿ ಹಾಗೂ ಫೆಬ್ರವರಿ–2025 ಕಾರ್ಮಿಕ ಭವಿಷ್ಯ ನಿಧಿ ವಂತಿಗೆ ಪಾವತಿಸಿರುವ ಚಲನ್ ಪ್ರತಿ. | |
| 5 | ಬಿಡ್‌ದಾರರು/ಸಂಸ್ಥೆರವರು ಇ.ಎಸ್.ಐ ನೋಂದಣಿ ಪ್ರಮಾಣ ಪತ್ರ ಹಾಗೂ 2023–24 ರಿಂದ 2025–2026 ಆರ್ಥಿಕ ವರ್ಷಗಳಲ್ಲಿ ಹಾಗೂ ಫೆಬ್ರವರಿ–2025 ಇ.ಎಸ್.ಐ ವಂತಿಕೆಯನ್ನು ಸಲ್ಲಿಸಿದ ಚಲನ್ ಪ್ರತಿ. | |
| 6 | ಬಿಡ್‌ದಾರರು/ಸಂಸ್ಥೆರವರು ಜಿ.ಎಸ್.ಟಿ ನೊಂದಣಿಯಾಗಿರುವ ಬಗ್ಗೆ ಪ್ರಮಾಣ ಪತ್ರ ಮತ್ತು ಆರ್ಥಿಕ ವರ್ಷಗಳಲ್ಲಿ 2023–24 ರಿಂದ 2025–2026 ಸಾಲಿನ GSTR-3B Clearence ಪ್ರಮಾಣ ಪತ್ರ ಹಾಗೂ ಪ್ಯಾನ್ ಕಾರ್ಡ್ ಪ್ರತಿ ಒದಗಿಸುವುದು. | |
| 7 | ಬಿಡ್‌ದಾರರು/ಸಂಸ್ಥೆರವರು ವೃತ್ತಿ ತೆರಿಗೆ ನೊಂದಣಿ ಪ್ರಮಾಣ ಪತ್ರ ಹಾಗೂ ಹಿಂದಿನ 2023–24 ರಿಂದ 2025–2026 ಆರ್ಥಿಕ ವರ್ಷಗಳಲ್ಲಿ ವೃತ್ತಿ ತೆರಿಗೆ ಭರ್ತಿ ಮಾಡಿದ ವಂತಿಗೆ Clear ಮಾಡಿರುವ ಪ್ರಮಾಣ ಪತ್ರ | |
| 8 | ಬಿಡ್‌ದಾರರು/ಸಂಸ್ಥೆರವರು ಮೇಲೆ ತಿಳಿಸಿದ ತಾಂತ್ರಿಕ ಷರತ್ತು ಕ್ರ.ಸಂ 02 ರಿಂದ 06 ರಲ್ಲಿ ಕೇಳಲಾದ ನೊಂದಣಿ ಪ್ರಮಾಣ ಪತ್ರಗಳು ಟೆಂಡರ್ ಪ್ರಕಟಣೆಯ ದಿನಾಂಕದಿಂದ ಕನಿಷ್ಠ 03 ವರ್ಷ ಮುಂಚಿತವಾಗಿ ನೊಂದಾಯಿಸಿರುವ ಬಗ್ಗೆ ದಾಖಲೆ ಪ್ರಮಾಣ ಪತ್ರ ಸಲ್ಲಿಸುವುದು | |
| 9 | ಬಿಡ್‌ದಾರರು/ಸಂಸ್ಥೆರವರು 03 ಆರ್ಥಿಕ ವರ್ಷಗಳಲ್ಲಿ ಅಂದರೆ 2023–24 ರಿಂದ 2025–2026 ಸಾಲಿನ ಆದಾಯ ತೆರಿಗೆ ಭರ್ತಿ ಮಾಡಿದ ಪ್ರಮಾಣ ಪತ್ರ. (ITR-5) ಗಳನ್ನು ಸಲ್ಲಿಸುವುದು.<br><br>**Previous Year** / **Assessment Year**<br>2023-24 / 2024-25<br>2024-25 / 2025-26<br>2025-26 / 2026-27 | |
| 10 | ಬಿಡ್‌ದಾರರು/ಸಂಸ್ಥೆರವರು ಆಡಿಟ್ ವರದಿಗಳು (Profit & Loss A/c, Income & Expenditure ಮತ್ತು Balance sheet of ಆರ್ಥಿಕ ವರ್ಷಗಳ 2023–24 ರಿಂದ 2025–2026 ನೇ ಸಾಲಿನ 3 ವರ್ಷಗಳ ವರದಿಗಳನ್ನು ಲಗತ್ತಿಸಬೇಕು ಮತ್ತು ಬಿಡ್‌ದಾರರು/ಸಂಸ್ಥೆರವರು ಆರ್ಥಿಕ ವರ್ಷಗಳ 2023–24 ರಿಂದ 2025–2026 ನೇ ಸಾಲಿನ ಪ್ರತಿ ಆರ್ಥಿಕ ವರ್ಷದಲ್ಲಿ ರೂ 2 ಕೋಟಿ ವಹಿವಾಟು ವಿವರಗಳನ್ನು (CA ರವರಿಂದ ದೃಢೀಕರಿಸಿದ ಪ್ರತಿಗಳನ್ನು ಲಗತ್ತಿಸಬೇಕು ಹಾಗೂ UDI ಸಂಖ್ಯೆಯನ್ನು ಹೊಂದಿರಬೇಕು). | |
| 11 | ಬಿಡ್‌ದಾರರು/ಸಂಸ್ಥೆರವರು ಈಗಾಗಲೇ ಸರ್ಕಾರಿ ಇಲಾಖೆಗೆ ಹೊರಗುತ್ತಿಗೆ ಸೇವೆ ಒದಗಿಸಿರುವ ಬಗ್ಗೆ ಕಾರ್ಯಾದೇಶ ಪತ್ರ ಮತ್ತು ತೃಪ್ತಿಕರ ಕಾರ್ಯದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದು ಸಲ್ಲಿಸಬೇಕು. (ಯಾವುದಾದರೂ ಒಂದು ವರ್ಷದ ಅನುಭವದಲ್ಲಿ ಕನಿಷ್ಟ 150 ಜನರ ಸೇವೆಯನ್ನು ಒದಗಿಸಿರುವ | |

| | | |
|---|---|---|
| | ಕಾರ್ಯಾದೇಶ ಸಂಸ್ಥೆಗಳ ಮುಖ್ಯಸ್ಥರಿಂದ ಪಡೆದು ಸಲ್ಲಿಸುವುದು) ಆರ್ಥಿಕ ವರ್ಷಗಳಾದ 2023–24 ರಿಂದ 2025–2026 ವರ್ಷದ ಅನುಭವ ಸಲ್ಲಿಸಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸುವುದು. | |
| 12 | ಬಿಡ್‌ದಾರರು/ಸಂಸ್ಥೆರವರು ಪೋಲೀಸ್ ಇಲಾಖೆಯಿಂದ ಪಡೆದ ಖಾಸಗೀ ಭದ್ರತಾ ಸೇವೆಯ ಪರವಾನಗಿ ನೋಂದಣಿ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು. | |
| 13 | ಬಿಡ್‌ದಾರರು/ಸಂಸ್ಥೆರವರು ಚಾಲ್ತಿಯಲ್ಲಿರುವ ಕಾಂಟ್ರಾಕ್ಟ್ ಲೇಬರ್ ಲೈಸನ್ಸ್ (Regulation and Abolition) act-1970 ಪ್ರತಿ ಲಗತ್ತಿಸಬೇಕು. | |
| 14 | ಸಂಸ್ಥೆಯು ಅಧಿಕೃತವಾಗಿ ಸಂಬಂಧಿಸಿದ ನೋಂದಣಿ ಅಧಿಕಾರಿಯಿಂದ ನೋಂದಾಯಿಸಿರುವ ದಾಖಲೆ (ಕೋ–ಆಪರೇಟಿವ್ ಸೊಸೈಟಿಯಿಂದ ಪಡೆದ ದಾಖಲೆ) ಒದಗಿಸುವುದು | |
| 15 | ಬಿಡ್‌ದಾರರು/ಸಂಸ್ಥೆರವರು ಕಾರ್ಮಿಕ ವೆಲ್ ಫೇರ್ ಇಲಾಖೆಯಲ್ಲಿ ಪಡೆದಿರುವ ಪಾರಂ–ಡಿ ಯಲ್ಲಿ 80 ಸಿಬ್ಬಂದಿಗಳಿಗೆ ಪಾವತಿಸಲಾಗಿರುವ ಚಲನ್‌ನ್ನು 2023–24 ರಿಂದ 2025–2026 ನೇ ಸಾಲಿನ ಪ್ರಮಾಣ ಪತ್ರವನ್ನು ಸಲ್ಲಿಸುವುದು. | |
| 16 | ಬಿಡ್‌ದಾರರು/ಸಂಸ್ಥೆರವರ ವಿರುದ್ಧ ಜಿಲ್ಲಾ ಪೋಲೀಸ್ ಇಲಾಖೆಯಲ್ಲಿ ಯಾವುದೇ ಮೊಕ್ಕದ್ದಮೆ ದಾಖಲಾಗದೆ ಇರುವ ಬಗ್ಗೆ ಮತ್ತು ಚಾರಣೆ ಬಾಕಿ ಇಲ್ಲದೇ ಇರುವ ಬಗ್ಗೆ ಪಡೆದ ಚಾಲ್ತಿಯಲ್ಲಿರುವ ಪರಶೀಲನಾ ಪ್ರಮಾಣ ಪತ್ರ. (Police Verification Certificate). ಕಡ್ಡಾಯವಾಗಿ ಸಲ್ಲಿಸುವುದು. | |
| 17 | ಬಿಡ್‌ದಾರರು/ಸಂಸ್ಥೆರವರು 2025–26ನೇ ಸಾಲಿನಲ್ಲಿ ಸ್ಥಳೀಯ ಸಂಸ್ಥೆಗಳಿಂದ ಪಡೆದ ವಾಣಿಜ್ಯ/ಟ್ರೇಡ್ ಲೈಸೆನ್ಸ್ ನೋಂದಣಿ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು, (ಬಿ.ಬಿ.ಎಂ.ಪಿ/ಸಿ.ಎಂ.ಸಿ/ಟಿ.ಎಂ.ಸಿ/ಗ್ರಾಮ ಪಂಚಾಯತಿ ವತಿಯಿಂದ) | |
| 18 | ಬಿಡ್‌ದಾರರು/ಸಂಸ್ಥೆರವರು ಎಂ.ಎಸ್.ಎಂ.ಇ ನೋಂದಣಿ ಪ್ರಮಾಣ ಪತ್ರ ಸಲ್ಲಿಸಬೇಕು | |
| 19 | ಬಿಡ್‌ದಾರರು/ಸಂಸ್ಥೆರವರು ಎಲ್ಲೇಲ್ಲಿ ಸೇವೆಯನ್ನು ಒದಗಿಸುತ್ತಿರುತ್ತಾರೊ ಆ ಜಿಲ್ಲೆಯ ಜಿಲ್ಲಾ ಕಾರ್ಮಿಕ ಇಲಾಖೆಯಿಂದ ತಮ್ಮ ಸಂಸ್ಥೆಯ ವಿರುದ್ದ ಯಾವುದೇ ಮೋಕದ್ದಮೇ ದಾಖಲಾಗದೇ ಇರುವ ಬಗ್ಗೆ ದೃಡೀಕರಣ ಪ್ರಮಾಣ ಪತ್ರ ಸಲ್ಲಿಸುವುದು. | |
| 20 | ಐ.ಎಸ್.ಒ ಪ್ರಮಾಣ ಪತ್ರ. | |
| 21 | ಬಿಡ್‌ದಾರರು/ಸಂಸ್ಥೆರವರು ಬಿಡ್‌ದಾರರು ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು ರವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಬ್ಯಾಂಕರ್ ಚೆಕ್ ರೂ.9,00,000/–(ರೂ.ಒಂಬತ್ತು ಲಕ್ಷ) ಸಲ್ಲಿಸುವುದು. | |
| 22 | ಬಿಡ್‌ದಾರರು/ಸಂಸ್ಥೆರವರು ಟೆಂಡರ್ ಅರ್ಜಿಯೊಂದಿಗೆ ಸಲ್ಲಿಸುವ ಎಲ್ಲಾ ದಾಖಲೆ ಪತ್ರದ ಪ್ರತಿಗಳನ್ನು ಸ್ವಯಂ ಧೃಢೀಕರಿಸಿ ಸಲ್ಲಿಸತಕ್ಕದ್ದು, ಟೆಂಡರ್‌ದಾರರು ಟೆಂಡರ್‌ಗಳ ಎಲ್ಲಾ ದಾಖಲೆಗಳ ಮೇಲೆ ಸ್ವಯಂ ಮೊಹರು ಹಾಕಿ ರುಜು ಮಾಡಿರಬೇಕು. | |
| 23 | GST Turn over should be authenticated by the GST Department for the year 2023-24, 2024-25, 2025-26 above Rs.2,00,00,000( two crore) per annum | |
| 24 | ಕಪ್ಪು ಪಟ್ಟಿಯಲ್ಲಿರುವ ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ ಹಾಗೂ ಕಪ್ಪು ಪಟ್ಟಿಯಲ್ಲಿ ಸೇರಿರದೆ ಇರುವ ಬಗ್ಗೆ ನೋಟರಿಯವರಿಂದ (200/–ರೂ) ಇ–ಸ್ಟಾಂಪ್‌ನ ಕಾಗದದಲ್ಲಿ ದೃಢೀಕರಿಸಿದ ಪ್ರತಿ ಸಲ್ಲಿಸುವುದು (ಟೆಂಡರ್‌ನಲ್ಲಿ ಪಾಲ್ಗೊಂಡಿರುವ ಸಂಸ್ಥೆಯವರು ಮೊದಲ ಪಾರ್ಟಿಯಾಗಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಚಿಕ್ಕಬಳ್ಳಾಪುರ ರವರು ಎರಡನೇ ಪಾರ್ಟಿಯಾಗಿ). | |

**ಷರಾ:** ಕ್ರ.ಸಂ 1 ರಿಂದ 24 ರ ವರೆಗೆ ಚೆಕ್‌ಲಿಸ್ಟ್‌ನಲ್ಲಿ ಕೇಳಲಾಗಿರುವ ಎಲ್ಲಾ ದಾಖಲೆಗಳನ್ನು ಸಲ್ಲಿಸಿದ್ದಲ್ಲಿ ಮಾತ್ರ ತಾಂತ್ರಿಕ ಬಿಡ್‌ನಲ್ಲಿ ಸಂಸ್ಥೆಯವರನ್ನು ಪರಿಗಣಿಸಲಾಗುವುದು ಇಲ್ಲವಾದಲ್ಲಿ ತಾಂತ್ರಿಕ ಬಿಡ್‌ನಲ್ಲಿ ಸಂಸ್ಥೆಯವರನ್ನು ತೀರಸ್ಕರಿಸಲಾಗುವುದು.

**ಬಿಡ್‌ದಾರರ ಸಹಿ & ಸಂಸ್ಥೆಯ ಮೊಹರು**

ಕರ್ನಾಟಕ ಸರ್ಕಾರ

# ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ, ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು ತಾಲ್ಲೂಕು, ಗೌರಿಬಿದನೂರು

ದೂರವಾಣಿ ಸಂಖ್ಯೆ: 08155 – 286550 ಇ-ಮೇಲ್ ವಿಳಾಸ: amoghgbnr123@gmail.com

## ಲಕೋಟೆ-2

## ಹಣಕಾಸಿನ ಷರತ್ತುಗಳು (ಆರ್ಥಿಕ ಲಕೋಟೆ)

**ಟೆಂಡರ್‌ದಾರರು ತಮ್ಮ ದರಗಳನ್ನು ಕೆಳಗಿನ ನಿಗದಿತ ನಮೂನೆಯಲ್ಲಿ ನಮೂದಿಸಬೇಕು.**

| ಕ್ರ.ಸಂ | ಹುದ್ದೆಯ ಹೆಸರು | ಸೇವಾ ಶುಲ್ಕ ದರ (ಶೇಕಡವಾರು ಒಬ್ಬರಿಗೆ) |
|---|---|---|
| 01 | ಫಾರ್ಮಾಸಿ ಅಧಿಕಾರಿ | |
| 02 | ಪ್ರಯೋಗ ಶಾಲಾ ತಂತ್ರಜ್ಞರು | |
| 03 | ಡೇಟಾ ಎಂಟ್ರಿ ಆಪರೇಟರ್ | |
| 04 | ಗ್ರೂಪ್ ಡಿ ಸಿಬ್ಬಂದಿ | |

**ವಿಶೇಷ ಸೂಚನೆ:**

1. ಟೆಂಡರ್ ದಾರರು ತಮ್ಮ ಸೇವಾ ಶುಲ್ಕ ದರವನ್ನು ಶೇಕಡವಾರು ದರದಲ್ಲಿ ಮಾತ್ರ ಮೇಲ್ಕಂಡ ನಮೂನೆಯಲ್ಲಿಯೇ ನಮೂದಿಸತಕ್ಕದ್ದು, ಒಂದು ವೇಳೆ ನಮೂದಿಸದಿದ್ದಲ್ಲಿ ಸ್ವಯಂ ತಿರಸ್ಕೃತ ಎಂದು ಪರಿಗಣಿಸಲಾಗುವುದು.

**ಟೆಂಡರ್‌ದಾರರ ಸಹಿ/ಮೊಹರು**